# ತಾಳೆ ಬೆಳೆ ಅಭಿವೃದ್ಧಿ ಯೋಜನೆ; ಜಿಲ್ಲಾ ವಲಯ ಕಾರ್ಯಕ್ರಮ (D-10)

## ಲೆಕ್ಕ ಶೀರ್ಷಿಕೆ: 2435-00-101-0-02

**ಯೋಜನೆಯ ಮುಖ್ಯ ಘಟಕ ಕಾರ್ಯಕ್ರಮಗಳು**

**1.00 ತರಬೇತಿ ಕಾರ್ಯಕ್ರಮ:**

**ಉದ್ದೇಶ : ತಾಳೆಬೆಳೆಯು ರಾಜ್ಯದಲ್ಲಿ ಒಂದು ಪ್ರಮುಖವಾದ ತೋಟಗಾರಿಕೆ ಬೆಳೆಯಾಗಿ ಹೊರಹೊಮ್ಮುತ್ತಿರುವುದರಿಂದ, ರೈತರಿಗೆ ತಾಳೆಬೆಳೆಯ ಬೇಸಾಯ ಕ್ರಮಗಳು, ಸಸ್ಯ ಸಂರಕ್ಷಣೆ ಕ್ರಮಗಳು, ತಾಳೆ ಹಣ್ಣಿನ ಕಟಾವಿನ ಬಗ್ಗೆ ತರಬೇತಿ ನೀಡಲು ಕ್ಷೇತ್ರೋತ್ಸವಗಳನ್ನು ತಾಳೆಬೆಳೆಯನ್ನು ಸುಧಾರಿತ ರೀತಿಯಲ್ಲಿ ಬೆಳೆಯುತ್ತಿರುವ ಪ್ರಗತಿಪರ ರೈತರ ತಾಳೆ ತಾಕುಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಪಡೆದುಕೊಳ್ಳಲು ಕ್ಷೇತ್ರ ಭೇಟಿ ಪ್ರವಾಸಗಳನ್ನು ಹಮ್ಮಿಕೊಂಡು ವಿಚಾರ ವಿನಿಯಮದ ಮೂಲಕ ಅರಿವು ಮೂಡಿಸುವುದು.**

**i. ರೈತರ ಆಯ್ಕೆ:**

1. ಎಲ್ಲಾ ವರ್ಗದ ಫಲಾನುಭವಿಗಳು ಅಂದರೆ ಸಾಮಾನ್ಯ,ಪರಿಶಿಷ್ಟ ಜಾತಿ , ಪರಿಶಿಷ್ಟ ಪಂಗಡ /ಸಣ್ಣ ಹಾಗೂ ಅತೀ ಸಣ್ಣ ರೈತರು ಹಾಗೂ ರೈತ ಮಹಿಳೆಯರು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ. ಪರಿಶಿಷ್ಟ ಜಾತಿ ವರ್ಗದವರಿಗೆ (SC) ಒಟ್ಟು ಅನುದಾನದ ಕನಿಷ್ಟ ಶೇ.16.2%ರಷ್ಟು ಪರಿಶಿಷ್ಟ ಜಾತಿ-ಪಂಗಡ ದವರಿಗೆ (ST) ಕನಿಷ್ಟ ಶೇ.8%ರಷ್ಟು ಮತ್ತು ಸಣ್ಣ, ಅತೀ ಸಣ್ಣ ರೈತರು ಮತ್ತು ರೈತ ಮಹಿಳೆಯರಿಗೆ ಕನಿಷ್ಟ ಶೇ.30%ರಷ್ಟು ಅನುದಾನ ಮೀಸಲಿಡಬೇಕು.

**ii. ಅನುಷ್ಠಾನ ಕ್ರಮ:**

1. ರೈತರನ್ನು ಸ್ಥಳೀಯ ಅಥವಾ ನೆರೆಯ ತಾಲೂಕು / ಜಿಲ್ಲೆಯಲ್ಲಿ ತಾಳೆ ಬೇಸಾಯದಲ್ಲಿ ತೊಡಗಿಸಿ ಕೊಂಡಿರುವ ಪ್ರಗತಿ ಪರ ತಾಳೆ ರೈತರ ತಾಕಿಗೆ ಪ್ರವಾಸ ಕರೆದುಕೊಂಡು ಹೋಗಿ ತಾಳೆ ಬೇಸಾಯ ಪದ್ದತಿಗಳ ಬಗ್ಗೆ ಪರಿಚಯ ನೀಡಬಹುದಾಗಿರುತ್ತದೆ.
2. ಸ್ಥಳೀಯ ತರಬೇತಿ ಕಾರ್ಯಕ್ರಮಕ್ಕೆ ಪ್ರತಿ ಒಬ್ಬ ರೈತರಿಗೆ ಪ್ರತಿ ದಿನಕ್ಕೆ ಗರಿಷ್ಟ ರೂ.400/- ರಂತೆ ಗರಿಷ್ಟ ಎರಡು ದಿನಕ್ಕೆ ಒಂದು ಘಟಕದಲ್ಲಿ 30 ಜನ ರೈತರಿಗೆ ರೂ.24000/- ಖರ್ಚು ಮಾಡಬಹುದಾಗಿರುತ್ತದೆ.

| Components | Rate | Amount (Rs.) |
|---|---|---|
| Training material / stationery / venue cost / Audio-visual aids etc. | Rs.2500/- per training. | **2500/-** |
| Dormitory / Travel / Transport etc. | Rs.4500/- per training. | **4500/-** |
| 2 Meal / Refreshment for farmers | Rs.250/ day X 30 farmers X 2 Days | **15000/-** |
| Honorarium to SMS / Scientist etc. | Rs.250 / lecture X 8 lectures in two days. | **2000/-** |
| | **Total:** | **24000/-** |

3. **ಮೈಸೂರು ಜಿಲ್ಲೆಯ ತಾರಕ ತರಬೇತಿ ಕೇಂದ್ರದಲ್ಲಿ ರೈತರಿಗೆ ತರಭೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಪ್ರತಿ ಒಬ್ಬ ರೈತರಿಗೆ ಪ್ರತಿ ದಿನಕ್ಕೆ ಗರಿಷ್ಟ ರೂ. 400/- ರಂತೆ ಗರಿಷ್ಟ 3 ದಿನಗಳಿಗೆ ಗರಿಷ್ಟ ಒಬ್ಬ ರೈತರಿಗೆ ರೂ.1200/- ಗಳನ್ನು ಖರ್ಚು ಮಾಡಬಹುದಾಗಿರುತ್ತದೆ.**
4. ಈ ಕಾರ್ಯಕ್ರಮವನ್ನು ಇಲಾಖಾ ಅನುಷ್ಠಾನಾಧಿಕಾರಿಗಳು ಹಾಗೂ ಕಂಪನಿಯವರು ಜಂಟಿಯಾಗಿ ನಿರ್ವಹಿಸಬೇಕು.
5. ತರಬೇತಿ ಕಾರ್ಯಕ್ರಮಕ್ಕೆ, ವಲಯದ ತಾಳೆ ಬೆಳೆ ಅಭಿವೃದ್ಧಿ ಯೋಜನೆ ನೋಡಲ್ ಅಧಿಕಾರಿಗಳು / ಕೃಷಿ ವಿಜ್ಞಾನ ಕೇಂದ್ರ / ಕೃಷಿ / ತೋಟಗಾರಿಕೆ ವಿದ್ಯಾನಿಲಯದ ಉಪನ್ಯಾಸಕರನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಹ್ವಾನಿಸುವುದು.
6. ಇಲಾಖಾ ಅನುಷ್ಠಾನಾಧಿಕಾರಿಗಳು ಖಾಸಗಿ ಪಾಲುದಾರ ಸಂಸ್ಥೆಯೊಂದಿಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಖರ್ಚು ಭರಿಸಬಹುದು **ಅಥವಾ**
7. ಖಾಸಗಿ ಸಂಸ್ಥೆಗಳು ಮೊದಲು ರೈತ ತರಬೇತಿ / ಪ್ರವಾಸ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ, ತರಬೇತಿಯಲ್ಲಿ ಪಾಲ್ಗೊಂಡ ರೈತರ ಪಟ್ಟಿ ಮತ್ತು ಪ್ರವಾಸಕ್ಕೆ ಸಂಬಂಧ ಪಟ್ಟ ಬಿಲ್ಲುಗಳನ್ನು ಮತ್ತು ಇತರೆ ದಾಖಲಾತಿ/ವೋಚರ್‌ಗಳನ್ನು ತರಬೇತಿ ಕಾರ್ಯಕ್ರಮದ **<u>ಛಾಯಚಿತ್ರ ಮತ್ತು ವಲಯದ ನೋಡಲ್ ಅಧಿಕಾರಿಗಳ ಧೃಡಿಕರಣೆದೊಂದಿಗೆ ತಾಲ್ಲೂಕು</u>** ಅನುಷ್ಠಾನಾಧಿಕಾರಿಗಳಿಗೆ ಸಲ್ಲಿಸುವುದು, ಅನುಷ್ಠಾನಾಧಿಕಾರಿಗಳು, ಸದರಿ ಬಿಲ್ಲುಗಳನ್ನು ನಿಯಮಾನುಸಾರ ಪರಿಶೀಲಿಸಿ, ಸಂಸ್ಥೆಗೆ ತರಬೇತಿ ಕಾರ್ಯಕ್ರಮದ ಹಣವನ್ನು ಮರುಪಾವತಿಸಲು ಕ್ರಮವಹಿಸುವುದು.
8. ತಾಳೆ ರೈತರ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಶ್ಯಾಮಿಯಾನ, ಪೀಠೋಪರಣಗಳ ಬಾಡಿಗೆ, ರೈತರಿಗೆ stationery, ಲಘು ಉಪಹಾರ, ಕಾಫಿ / ಟೀ ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ಗೌರವ ಧನ ವಿತರಿಸಲು ವೆಚ್ಚ ಮಾಡಬಹುದಾಗಿದೆ (ಒಟ್ಟು ತಾಳೆ ರೈತರ ಸಂಖ್ಯೆಗನುಗುಣವಾಗಿ ಪ್ರತಿ ರೈತರಿಗೆ ಪ್ರತಿ ದಿನಕ್ಕೆ ರೂ.400/- ರಂತೆ ಲೆಕ್ಕ ಹಾಕಿ).
9. ನೋಡಲ್ ಅಧಿಕಾರಿಗಳು ತರಬೇತಿ ಪಡೆದ ರೈತರ ಹೆಸರು / ವರ್ಗ/ ವಿಳಾಸ / ತರಬೇತಿ ಅವಧಿ ಇತ್ಯಾದಿಗಳ ದಾಖಲಾತಿಯಿಡುವುದು.

## <u>2 .00 ಯಂತ್ರೋಪಕರಣವನ್ನು ಕೊಳ್ಳಲು ಸಹಾಯಧನ</u>

**ಉದ್ದೇಶ: ತಾಳೆ ಬೇಸಾಯ ಪದ್ದೆತಿಯಲ್ಲಿ ಯಾಂತ್ರಿಕರಣ ತರುವ ಉದ್ದೇಶದಿಂದ ಮತ್ತು ಕೂಲಿ ಕಾರ್ಮಿಕರ ಕೊರತೆಯನ್ನು ನಿವಾರಿಸುವ ಸಲುವಾಗಿ, ತಾಳೆ ರೈತರಿಗೆ ವಿವಿಧ ಯಂತ್ರೋಪಕರಣಗಳನ್ನು ಕೊಳ್ಳಲು ಸಹಾಯಧನ ವಿಸ್ತರಿಸಲು ಉದ್ದೇಶಿಸಲಾಗಿದೆ.**

**<u>ಅನುಷ್ಠಾನ ಕ್ರಮ:</u>**

1. ಉಪಕರಣಗಳನ್ನು ತಾಳೆ ರೈತರು ಮೊದಲು ಖರೀದಿಸಿ ಸೂಕ್ತ ದಾಖಲೆಗಳೊಂದಿಗೆ ಸಹಾಯಧನವನ್ನು ಕೋರಿ ಸಂಬಂಧ ಪಟ್ಟ RSK ಅಧಿಕಾರಿಗಳ ಬಳಿ ಅಥವಾ ತಾಲೂಕು ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.
2. **<u>ಕಟಾವು ಉಪಕರಣಗಳನ್ನು</u>** ತಾಳೆ ಬೆಳೆ ಯೋಜನೆಯಲ್ಲಿ ತೊಡಗಿಸಿಕೊಂಡಿರುವ ಖಾಸಗಿ ಸಂಸ್ಥೆಗಳು ಒಟ್ಟಾಗಿ (in bulk) ಖರೀದಿಸಿ ತಾಳೆ ರೈತರಿಗೆ ವಿತರಿಸಬಹುದಾಗಿದೆ.
3. ಅಂತಹ ಸಂದರ್ಭದಲ್ಲಿ ಕಟಾವು ಉಪಕರಣದ ಶೇಖಡ 50ರಷ್ಟು ಸಹಾಯಧನವನ್ನು ಖಾಸಗಿ ಪಾಲುದಾರ ಸಂಸ್ಥೆಗೆ ವಿತರಿಸುವುದು. ಖಾಸಗಿ ಸಂಸ್ಥೆಯು ಅನುಷ್ಠಾನಾಧಿಕಾರಿಗಳಿಗೆ ಕಟಾವು ಉಪಕರಣವನ್ನು ವಿತರಿಸಿದ

ಫಲಾನುಭವಿಗಳ ಪಟ್ಟಿಯನ್ನು ಸಲ್ಲಿಸುವುದು ಮತ್ತು ಉಳಿದ ಶೇ. 50 ರಷ್ಟು ವೆಚ್ಚವನ್ನು ಖಾಸಗಿ ಸಂಸ್ಥೆಗಳು ತಾಳೆ ರೈತರು ಸರಬರಾಜು ಮಾಡುವ ತಾಳೆ ಹಣ್ಣಿನ ಬಾಬ್ತಿನಲ್ಲಿ ಮುರಿದು ಕೊಳ್ಳಲು ಕ್ರಮವಹಿಸಬಹುದಾಗಿರುತ್ತದೆ.

4. ಉಪಕರಣದ ಒಟ್ಟು ವೆಚ್ಚದ ಶೇಖಡ 50 ರಷ್ಟು ಮೊತ್ತವನ್ನು ಸಹಾಯಧನದ ರೂಪದಲ್ಲಿ ವಿತರಿಸಲಾಗುವುದು.
5. ಸಹಾಯಧನವನ್ನು ನೇರವಾಗಿ ತಾಳೆ ರೈತ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಯಾಗುವ ಹಾಗೆ ECS ಮೂಲಕ ಜಮೆ ಮಾಡುವುದು.

<u>ವಿವಿಧ ಉಪಕರಣಗಳಿಗೆ ಒದಗಿಸಲಾಗುವ ಸಹಾಯಧನ ಪ್ರಮಾಣ ಈ ಕೆಳಕಂಡಂತೆ ಇರುತ್ತದೆ.</u>

| ಕ್ರಮ ಸಂ. | ಉಪಕರಣ | ಸಹಾಯಧನದ ಪ್ರಮಾಣ | ಪ್ರತಿ ಘಟಕಕ್ಕೆ ಗರಿಷ್ಟ ಪ್ರಮಾಣದ ಸಹಾಯಧನ |
|---|---|---|---|
| 1. | Manually handled / high reach oil palm cutter | 50% | ರೂ.1500/- |
| 2. | Oil Palm Protective wire mesh | 50% | ರೂ.15000/- |
| 3. | Motorized Chizel | 50% | ರೂ.10000/- |
| 4. | Aluminium Portable ladder | 50% | ರೂ.3000/- |
| 5. | Chaff cutter for chaffing of Oil Palm leaves | 50% | ರೂ.7000/- |
| 6. | Small tractor upto 20 HP along with trolley | 25% (addln 10% to SC / ST / small / Woman farmers) | ರೂ.75000/- |

6. ಮೇಲ್ಕಂಡ ವಿವಿಧ ಉಪಕರಣಗಳನ್ನು, ತಾಳೆ ರೈತರು ಇಲಾಖಾ ಅನುಮೋದಿತ ಸಂಸ್ಥೆಗಳ ಮೂಲಕ ಖರೀದಿಸತಕ್ಕದ್ದು ಅಥವಾ ISI ಮುದ್ರೆ ಇರುವ ಉಪಕರಣಗಳನ್ನು ಕೊಳ್ಳಬಹುದಾಗಿದೆ.
7. 20 HPವರೆಗಿನ ಸಣ್ಣ ಟ್ರ್ಯಾಲೀವುಳ್ಳ ಟ್ರ್ಯಾಕ್ಟರ್ ಖರೀದಿಸಲು ತೋಟಗಾರಿಕೆ ನಿರ್ದೇಶನಾಲಯದ NHM ವಿಭಾಗದಿಂದ ಹೊರಡಿಸಲಾಗಿರುವ ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳುವುದು.

<u>ಅನುದಾನ:</u>

ರಾಜ್ಯ ಸರ್ಕಾರವು ಸದರಿ ಯೋಜನೆಯಡಿ 2014-15ನೇ ಸಾಲಿಗೆ ರೂ.106.68 ಲಕ್ಷಗಳ ಅನುದಾನವನ್ನು ಗೊತ್ತು ಮಾಡಿದೆ. ಕೇಂದ್ರ ಸರ್ಕಾರವು ತನ್ನ ಪಾಲಿನ ಶೇಖಡ 75ರಷ್ಟು ಅನುದಾನವನ್ನು ಬಿಡುಗಡೆ ಮಾಡಿದ ನಂತರ ರಾಜ್ಯ ಸರ್ಕಾರವು ತನ್ನ ಪಾಲಿನ ಶೇಖಡ 25 ರಷ್ಟು ಅನುದಾನವನ್ನು ಸೇರಿಸಿ ಅನುದಾನವನ್ನು ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿ ತೋಟಗಾರಿಕೆ ಉಪ ನಿರ್ದೇಶಕರು ಅನುದಾನವನು ಜಿಲ್ಲಾ ಪಂಚಾಯತ್‌ಗಳಿಂದ ಬಿಡುಗಡೆ ಮಾಡಿಸಿಕೊಂಡು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಿಸಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

<u>Reporting and Documentation</u>

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇಮೇಲ್ ಮೂಲಕ ತಿಂಗಳ 3ನೇ ದಿನಾಂಕದ ಒಳಗಾಗಿ ತಪ್ಪದೇ ಸಲ್ಲಿಸುವುದು.

2. ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ ತೋಟಗಾರಿಕೆ ಅಪರ ನಿರ್ದೇಶಕರು, ತಾಳೆ ಬೆಳೆ ಯೋಜನೆ ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಕಳುಹಿಸುವುದು.

**ಅನುಬಂಧಗಳು:**

1. **ತಾಳೆಬೆಳೆ ಯೋಜನೆ (S-03) ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಬಟವಾಡೆ ಅಧಿಕಾರಿ, ಕಾರ್ಯವ್ಯಾಪ್ತಿ ಜಿಲ್ಲೆಗಳು ಮತ್ತು ಮೇಲುಸಹಿ ಪ್ರಾಧಿಕಾರದ ವಿವರ.**
2. D-10 ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಬಟವಾಡೆ ಅಧಿಕಾರಿ, ಕಾರ್ಯವ್ಯಾಪ್ತಿ ಜಿಲ್ಲೆಗಳು ಮತ್ತು ಮೇಲುಸಹಿ ಪ್ರಾಧಿಕಾರದ ವಿವರ
3. ಕ್ಷೇತ್ರ ಪರಿಶೀಲನಾ ವರದಿ (ಹನಿ ನೀರಾವರಿ, ಕಟಾವು ಮಾಡುವ ಯಂತ್ರ)
4. **ಮಾಸಿಕ ಪ್ರಗತಿ ವರದಿಗಳ ನಮೂನೆ.**

**ತೋಟಗಾರಿಕೆ ನಿರ್ದೇಶಕರು**

## D-10 ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಬಟವಾಡೆ ಅಧಿಕಾರಿ, ಕಾರ್ಯವ್ಯಾಪ್ತಿ ಜಿಲ್ಲೆಗಳು ಮತ್ತು ಮೇಲುಸಹಿ ಪ್ರಾಧಿಕಾರದ ವಿವರ

### D-10 ತಾಳೆ ಬೆಳೆ ಯೋಜನೆಯಡಿ ಆಡಳಿತಾತ್ಮಕ ವ್ಯವಸ್ಥೆ

| ತಾಳೆ ಬೆಳೆ ಯೋಜನೆ | ಭಟವಾಡೆ ಅಧಿಕಾರಿ | ಸಂಬಂಧಿಸಿದ ಜಿಲ್ಲೆಗಳು | ಬಿಲ್ಲುಗಳ ಮೇಲು ಸಹಿ ಪ್ರಾಧಿಕಾರ |
|---|---|---|---|
| ಜಿಲ್ಲಾ ಪಂಚಾಯತ್ ಕಾರ್ಯಕ್ರಮ (D-10) | ಹಿ.ಸ.ತೋ.ನಿ. ಜಿ.ಪಂ., ಮೈಸೂರು | ಮೈಸೂರು | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ. ಮೈಸೂರು. |
| | ಸ.ತೋ.ನಿ, ಜ.ಪಂ., ಮಳವಳ್ಳಿ ತಾಲೂಕು, ಮಂಡ್ಯ ಜಿಲ್ಲೆ | ಮಂಡ್ಯ | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಮಂಡ್ಯ |
| | ಹಿ.ಸ.ತೋ.ನಿ. , ಜಿ.ಪಂ., ಚಾಮರಾಜನಗರ ತಾ. ಚಾಮರಾಜನಗರ | ಚಾಮರಾಜನಗರ | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಚಾಮರಾಜನಗರ |
| | ಹಿ.ಸ.ತೋ.ನಿ. , ಜಿ.ಪಂ., ವಿರಾಜಪೇಟೆ ತಾಲ್ಲೂಕು ಕೊಡಗು ಜಿಲ್ಲೆ. | ಕೊಡಗು | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಕೊಡಗು |
| | ಹಿ.ಸ.ತೋ.ನಿ. , ಜಿ.ಪಂ., ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ | ಹಾಸನ | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಹಾಸನ |
| | ಹಿ.ಸ.ತೋ.ನಿ., ಜಿ.ಪಂ., ಶಿವಮೊಗ್ಗ | ಶಿವಮೊಗ್ಗ | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಶಿವಮೊಗ್ಗ |
| | ಹಿ.ಸ.ತೋ.ನಿ. , ಜಿ.ಪಂ., ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು. | ಚಿಕ್ಕಮಗಳೂರು | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಚಿಕ್ಕಮಗಳೂರು. |
| | ಹಿ.ಸ.ತೋ.ನಿ. , ಜಿ.ಪಂ., ದಾವಣಗೆರೆ ತಾಲ್ಲೂಕು ದಾವಣಗೆರೆ. | ದಾವಣಗೆರೆ | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ದಾವಣಗೆರೆ |
| | ಹಿ.ಸ.ತೋ.ನಿ. , ಜಿ.ಪಂ., ರಾಣಿಬೆನ್ನೂರು, ಹಾವೇರಿ. | ಹಾವೇರಿ | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಹಾವೇರಿ |
| | ಹಿ.ಸ.ತೋ.ನಿ. , ಜಿ.ಪಂ., ಹೊಸಪೇಟೆ, ಬಳ್ಳಾರಿ. | ಬಳ್ಳಾರಿ | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಬಳ್ಳಾರಿ |
| | ಹಿ.ಸ.ತೋ.ನಿ. , ಜಿ.ಪಂ., ಕೊಪ್ಪಳ ತಾಲ್ಲೂಕು ಕೊಪ್ಪಳ. | ಕೊಪ್ಪಳ | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಕೊಪ್ಪಳ |
| | ಹಿ.ಸ.ತೋ.ನಿ. , ಜಿ.ಪಂ., ರಾಯಚೂರು ತಾಲ್ಲೂಕು ರಾಯಚೂರು. | ರಾಯಚೂರು | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ರಾಯಚೂರು |
| | ಸ.ತೋ.ನಿ. , ಜಿ.ಪಂ., ಮುಂಡಗರಿ ತಾಲೂಕು, ಗದಗ | ಗದಗ | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಗದಗ |
| | ಹಿ.ಸ.ತೋ.ನಿ. , ಜಿ.ಪಂ., ಬೆಳಗಾವಿ ತಾಲೂಕು, ಬೆಳಗಾವಿ ಜಿಲ್ಲೆ. | ಬೆಳಗಾವಿ | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಬೆಳಗಾವಿ |
| | ಹಿ.ಸ.ತೋ.ನಿ., ಜಿ.ಪಂ., ಬಸವನಬಾಗೇವಾಡಿ ತಾಲೂಕು, ಬಿಜಾಪುರ | ಬಿಜಾಪುರ | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಬಿಜಾಪುರ |
| | ಹಿ.ಸ.ತೋ.ನಿ. , ಜಿ.ಪಂ., ಬಾಗಲಕೋಟೆ ತಾ. ಬಾಗಲಕೋಟೆ | ಬಾಗಲಕೋಟೆ | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಬಾಗಲಕೋಟೆ |
| | ಹಿ.ಸ.ತೋ.ನಿ., ಜಿ.ಪಂ., ಶಾಹಪುರ, ಯಾದಗಿರಿ | ಯಾದಗಿರಿ | ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ಯಾದಗಿರಿ |

## ಕ್ಷೇತ್ರ ಪರಿಶೀಲನಾ ವರದಿ

| ಕ್ರ ಸಂ. | ವಿವರ | |
|---|---|---|
| 1. | ತಾಳೆ ರೈತರ ಹೆಸರು ಮತ್ತು ತಾಳೆ ತಾಕಿನ ಪೂರ್ಣ ವಿಳಾಸ | |
| 2. | ಸರ್ವೆ ನಂ. | |
| 3. | ತಾಳೆ ಮರಗಳ ಸಂ. ಮತ್ತು ವಿಸ್ತೀರ್ಣ | |
| 4. | ತಾಳೆ ಮರ / ಸಸಿಗಳ ವಯಸ್ಸು. | |
| 5. | ಯಾವ ಕಾಂಪೊನೆಂಟ್ / ಚಟುವಟಿಕೆಗಾಗಿ ಸಹಾಯಧನ ಒದಗಿಸಲಾಗುತ್ತಿದೆ. | |
| 6. | ಕ್ಷೇತ್ರ ಪರಿಶೀಲನೆಗೆ ಬಂದ ಅಧಿಕಾರಿಯ ಹೆಸರು ಮತ್ತು ಪದನಾಮ | |
| 7. | ಕ್ಷೇತ್ರ ಪರಿಶೀಲನೆಗೆ ಬಂದ ದಿನಾಂಕ | |
| 8. | ಉಪಕರಣವನ್ನು ಕೊಂಡ / ಚಟುವಟಿಕೆಯನ್ನು ಅಳವಡಿಸಿದ ದಿನಾಂಕ | |
| 9. | ಅಳವಡಿಸಿದ ಕಾಂಪೊನೆಂಟ್ / ಚಟುವಟಿಕೆ ತೃಪ್ತಿಕರವಾಗಿ ಬಳಕೆಯಲ್ಲಿರುವ ಬಗ್ಗೆ ಷರಾ | |
| 10. | ಇತ್ತರೆ ಮಾಹಿತಿ | |

ರೈತ ಸಂಪರ್ಕ ಕೇಂದ್ರದ ಅಧಿಕಾರಿ,
________ ಹೊಬಳಿ, ______ ತಾಲೂಕು.
_______ ಜಿಲ್ಲೆ.

ತಾಲೂಕು ಅನುಷ್ಟಾನಾಧಿಕಾರಿ /
ತಾಳೆ ಬೆಳೆ ಯೋಜನೆಯ ನೋಡಲ್ ಅಧಿಕಾರಿ,
_________ ಜಿಲ್ಲೆ

## ಮಾಸಿಕ ಪ್ರಗತಿ ವರದಿ

ಅನುಷ್ಠಾನಾಧಿಕಾರಿ: ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ____________________ ಜಿಲ್ಲೆ.

ಯೋಜನೆ: ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ತಾಳೆ ಬೆಳೆ ಅಭಿವೃದ್ಧಿ ಯೋಜನೆ

ಯೋಜನೆ ಸಂಖ್ಯೆ: (D-10)

ಲೆಕ್ಕ ಶೀರ್ಷಿಕೆ: 2401-00-108-2-18 (CSS Plan)

(ರೂ. ಲಕ್ಷಗಳಲ್ಲಿ)

| ಕ್ರಮ ಸಂ. | ಕಾರ್ಯಕ್ರಮ | ________ ಮಾಹೆಯ ಅಂತ್ಯಕ್ಕೆ ಗುರಿ (cummulative) | | ಬಿಡುಗಡೆಯಾದ ಅನುದಾನ | _________ ಮಾಹೆಯ ಅಂತ್ಯಕ್ಕೆ ಸಾಧನೆ (Cummulative) | | ಷರ: |
|---|---|---|---|---|---|---|---|
| | | ಭೌತಿಕ | ಆರ್ಥಿಕ | | ಭೌತಿಕ | ಆರ್ಥಿಕ | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | ಒಟ್ಟು: | | | | | | |

**ಅನುಷ್ಠಾನಾಧಿಕಾರಿಯವರ ಸಹಿ**

## <u>ಮಾಸಿಕ ವರ್ಗಾವಾರು ಪ್ರಗತಿ ವರದಿ -(D-10)</u>

ಅನುಷ್ಠಾನಾಧಿಕಾರಿ ಮತ್ತು ಜಿಲ್ಲೆ: ತೋಟಗಾರಿಕೆ ಉಪ ನಿರ್ದೇಶಕರು, ಜಿ.ಪಂ., ___________________ ಜಿಲ್ಲೆ.

ಯೋಜನೆ: ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ತಾಳೆ ಬೆಳೆ ಅಭಿವೃದ್ಧಿ ಯೋಜನೆ

**ಯೋಜನೆ ಸಂಖ್ಯೆ: D-10**

ಲೆಕ್ಕ ಶೀರ್ಷಿಕೆ: 2401-00-108-2-18 (CSS Plan)

**<u>_________ ಮಾಹೆಯ ಅಂತ್ಯಕ್ಕೆ</u>**

| ಕ್ರಮ ಸಂ. | ಕಾರ್ಯಕ್ರಮ | SC category 16.2% of the financial target | | ST category 8% of the financial target | | Woman category 30% of the financial allocation | | Minority 5% of the financial allocation | | Handicap 3% of the financial allocation | |
|---|---|---|---|---|---|---|---|---|---|---|---|
| | | Phy Ach | Fin Ach | Phy Ach | Fin Ach | Phy Ach | Fin Ach | Phy Ach | Fin Ach | Phy Ach | Fin Ach |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |

**ಅನುಷ್ಠಾನಾಧಿಕಾರಿಯವರ ಸಹಿ**